## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 75 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 15.07.2024 |
| 4) | ಉತ್ತರಿಸುವವರು | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಸರ್ಕಾರ ಜಾರಿಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳು ಯಾವುವು; ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡಗಳೇನು; | **<u>ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ</u>**<br>ಕೌಶಲ್ಯಾಭಿವೃದ್ಧಿ, ಇಲಾಖೆಯಿಂದ ಸರ್ಕಾರ ಜಾರಿಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳು ಈ ಕೆಳಗಿನಂತಿದೆ:<br><br>1. <u>ಯುವನಿಧಿ ಯೋಜನೆ</u>:<br>ಕರ್ನಾಟಕ ಸರ್ಕಾರವು 2023-24ನೇ ಸಾಲಿನಲ್ಲಿ ಯುವನಿಧಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, 2022-23 ರಲ್ಲಿ ಪದವಿ/ಸ್ನಾತಕೋತ್ತರ ಅಥವಾ ಡಿಪ್ಲೋಮಾ ತೇರ್ಗಡೆಯಾದ, ರಾಜ್ಯದಲ್ಲಿ ಕನಿಷ್ಠ 6 ವರ್ಷ ವ್ಯಾಸಂಗ ಮಾಡಿರುವ, ಯಾವುದೇ ಶಿಕ್ಷಣ ಮುಂದುವರೆಸದೆ ಇರುವ, ಸರ್ಕಾರಿ/ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ಪಡೆಯದಿರುವ, ಸ್ವಯಂ ಉದ್ಯೋಗ ಕೈಗೊಳ್ಳದಿರುವ ಅಭ್ಯರ್ಥಿಗಳಿಗೆ ಅವರುಗಳು ತೇರ್ಗಡೆಯಾದ ದಿನಾಂಕದಿಂದ 180 ದಿನಗಳ ನಂತರ ಕ್ರಮವಾಗಿ ರೂ.3000/- ಹಾಗೂ ರೂ.1500/-ಗಳ ನಿರುದ್ಯೋಗ ಭತ್ಯೆ (ಗರಿಷ್ಠ 2 ವರ್ಷಗಳ ಅವಧಿಗೆ ಅಥವಾ ಉದ್ಯೋಗ ದೊರಕುವವರೆಗೆ) ನೀಡುವ ಯೋಜನೆ ಜಾರಿ ಮಾಡಿರುತ್ತದೆ. ಅರ್ಹ ಫಲಾನುಭವಿಗಳ ಖಾತೆಗೆ ನೇರ ನಗದು ವರ್ಗಾವಣೆ ಮೂಲಕ ನಿರುದ್ಯೋಗ ಭತ್ಯೆಯನ್ನು ವರ್ಗಾಯಿಸಲಾಗುತ್ತಿದೆ.<br><br>2.<u>ಸ್ಟಡಿ ಸರ್ಕಲ್</u>:<br>ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಸ್ಟಡಿ ಸರ್ಕಲ್ ಕಾರ್ಯಕ್ರಮದ ಮೂಲಕ ಸಾರ್ವಜನಿಕ ಕ್ಷೇತ್ರದ ವಿವಿಧ ನೇಮಕಾತಿಗಳಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಉಚಿತ ಪರೀಕ್ಷಾ ಪೂರ್ವ ತರಬೇತಿಗಳನ್ನು ಕಾಲಕಾಲಕ್ಕೆ ಆಯೋಜಿಸಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳು ಇದರ ಪ್ರಯೋಜನ ಪಡೆಯಬಹುದಾಗಿರುತ್ತದೆ. ಈ ಯೋಜನೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಅನ್ವಯಿಸುವ ಶೈಕ್ಷಣಿಕ ಮತ್ತು ವಯಸ್ಸಿನ ಅರ್ಹತೆಗಾಗಿ ಪಾತ್ರರಾಗುವ ಎಲ್ಲಾ ಅಭ್ಯರ್ಥಿಗಳು ಪ್ರಯೋಜನ ಪಡೆಯಬಹುದಾಗಿರುತ್ತದೆ. |

| | |
|---|---|
| | <u>3. ಉದ್ಯೋಗ ಮೇಳ</u>:<br>ಪ್ರತಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಉದ್ಯೋಗಾಕಾಂಕ್ಷಿಗಳು ಮತ್ತು ನಿಯೋಜಕರನ್ನು ಒಂದೇ ವೇದಿಕೆಯಡಿ ತರಲು ನೇರ ಸಂದರ್ಶನ, ಅಧಿಸೂಚಿತ ಹುದ್ದೆಗಳಿಗೆ ಪುರಸ್ಕರಣೆ ಹಾಗೂ ಉದ್ಯೋಗ ಮೇಳಗಳಂತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಉದ್ಯೋಗಾಕಾಂಕ್ಷಿಗಳು ಅವರವರ ಶೈಕ್ಷಣಿಕ ಅರ್ಹತೆ ಅನುಸಾರ ಖಾಸಗಿ ಕ್ಷೇತ್ರದ ಉದ್ಯೋಗದಾತರನ್ನು ಸಂಪರ್ಕಿಸಿ ಉದ್ಯೋಗ ಪಡೆದುಕೊಳ್ಳುವ ಉಚಿತ ಅವಕಾಶಗಳು ಉದ್ಯೋಗಾಕಾಂಕ್ಷಿಗಳಿಗೆ ಕಲ್ಪಿಸಲಾಗುತ್ತಿದೆ.<br><br><u>4) ರಾಷ್ಟ್ರೀಯ ವೃತ್ತಿ ಸೇವೆ-ಮಾದರಿ ವೃತ್ತಿ ಕೇಂದ್ರಗಳು</u>:-<br>ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಮೌಲ್ಯ ವರ್ಧಿತ ಉದ್ಯೋಗ ಸೇವೆಯನ್ನು ಒದಗಿಸುವ ಸಲುವಾಗಿ 2015-16 ರಿಂದ ಕೇಂದ್ರ ಸರ್ಕಾರದ ಶೇ.100ರ ಅನುದಾನ ಬಳಸಿಕೊಂಡು ರಾಷ್ಟ್ರೀಯ ವೃತ್ತಿ ಸೇವೆ ಯೋಜನೆಯಡಿ ಈ ಆಯ್ದ 13 ಉದ್ಯೋಗ ವಿನಿಮಯ ಕೇಂದ್ರಗಳನ್ನು ಮಾದರಿ ವೃತ್ತಿ ಕೇಂದ್ರಗಳಾಗಿ ಪರಿವರ್ತಿಸಿದ್ದು, ಮೈಸೂರು, ಹಾಸನ, ಹುಬ್ಬಳ್ಳಿ, ಕಲಬುರಗಿ, ತುಮಕೂರು, ದಾವಣಗೆರೆ, ಬಳ್ಳಾರಿ, ಕೋಲಾರ, ಮಂಗಳೂರು, ಮಂಡ್ಯ, ಕೊಪ್ಪಳ, ಬೆಳಗಾವಿ ಮತ್ತು ಬಾಗಲಕೋಟೆ ಸಂಬಂಧಿಸಿದ ಜಿಲ್ಲೆಗಳ ಉದ್ಯೋಗಾಕಾಂಕ್ಷಿಗಳಿಗೆ ಇತ್ತೀಚಿನ ವೃತ್ತಿ ರಂಗಕ್ಕೆ ಬೇಡಿಕೆಯಾಗಿರುವ ಚಟುವಟಿಕೆಗಳಾದ ಸಮಾಲೋಚನೆ, ಅಲ್ಪಾವಧಿ ಕೌಶಲ್ಯ ತರಬೇತಿ ಹಾಗೂ ಉದ್ಯೋಗ ಮೇಳಗಳ ಆಯೋಜನೆ ಮೂಲಕ ಉದ್ಯೋಗಾವಕಾಶಗಳನ್ನು ಒದಗಿಸಲಾಗುತ್ತಿದೆ. ಅಲ್ಲದೇ, ಉದ್ಯೋಗಾಕಾಂಕ್ಷಿಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ನೋಂದಾಯಿಸಿಕೊಳ್ಳಲಾಗುತ್ತಿದ್ದು, ಅವರ ವಿದ್ಯಾರ್ಹತೆಗೆ ತಕ್ಕಂತೆ ಲಭ್ಯವಿರುವ ಶಿಕ್ಷಣ/ತರಬೇತಿ ಸೌಲಭ್ಯ ಹಾಗೂ ಉದ್ಯೋಗಾವಕಾಶಗಳ ಬಗ್ಗೆ ವೃತ್ತಿ ಮಾರ್ಗದರ್ಶನ ಮತ್ತು ವೃತ್ತಿ ಸಮಾಲೋಚನೆ ಸೌಲಭ್ಯ ನೀಡಲಾಗುತ್ತಿದೆ.<br><br><u>**ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ**</u><br><br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ರಾಜ್ಯದ ಯುವ ಜನತೆಗೆ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ವಿವಿಧ ವೃತ್ತಿಗಳಡಿ ವಿವಿಧ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ ನೀಡಲಾಗಿದ್ದು, ಈ ಯೋಜನೆಯಡಿ 18-35 ವರ್ಷದೊಳಗಿನ ಯುವಜನತೆಯು ತಮ್ಮ ವಿದ್ಯಾರ್ಹತೆಗೆ ತಕ್ಕಂತೆ ಆಯ್ಕೆಯ ಜಾಬ್ ರೋಲ್‌ಗಳಿಗೆ ಅರ್ಜಿಯನ್ನು ಸಲ್ಲಿಸಿ ತರಬೇತಿಯನ್ನು ಪಡೆಯಬಹುದಾಗಿದೆ. |

| | |
|---|---|
| | **<u>ಸಿಡಾಕ್</u>**<br>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರವು ರಾಜ್ಯದಲ್ಲಿ ಉದ್ಯಮಶೀಲತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರಗಳು<br>2. ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕಾ ತರಬೇತಿ<br>3. ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು\<br>4. ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು<br><br>ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಆಸಕ್ತ 18 ವರ್ಷ ಮೀರಿದ ನಿರುದ್ಯೋಗ ಯುವಕ/ಯವತಿಯರನ್ನು ಹಾಗೂ ಸ್ವಂತ ಉದ್ಯೋಗ ಮಾಡಲು ಉತ್ಸುಕವುಳ್ಳ ಅಭ್ಯರ್ಥಿಗಳನ್ನು ಪತ್ರಿಕಾ ಪ್ರಕಟಣೆ ಹಾಗೂ ಇತರೆ ಮಾಧ್ಯಮಗಳ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಅಲ್ಲದೇ, ಸಿಡಾಕ್ ಜಾಲತಾಣದಲ್ಲಿ ತರಬೇತಿಯನ್ನು ಪಡೆಯಲು ನೋಂದಣಿಗಾಗಿ ಅವಕಾಶವನ್ನು ಸಹ ಕಲ್ಪಿಸಲಾಗಿದೆ. |
| (ಆ) ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಸರ್ಕಾರ ಜಾರಿಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳಿಂದ ಯಾವ ರೀತಿ ಉದ್ಯೋಗ ಸೃಷ್ಟಿಗೆ ಅವಕಾಶಗಳಿವೆ; (ಮಾಹಿತಿ ನೀಡುವುದು) | **<u>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ</u>**<br>ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯ ಮಾರ್ಗಸೂಚಿಗಳನ್ವಯ ಎನ್.ಎಸ್.ಕ್ಯೂಎಫ್ ನಿಯಮಾವಳಿಗಳನ್ವಯ ತರಬೇತಿಯನ್ನು ಮಾನ್ಯತೆ ಪಡೆದು ಕೈಗೊಳ್ಳಲು ತರಬೇತುದಾರ ಸಂಸ್ಥೆಗಳಿಗೆ ತರಬೇತಿ ಕಾರ್ಯಾದೇಶವನ್ನು ನೀಡಲಾಗಿದ್ದು, ಒಟ್ಟಾರೆ ತರಬೇತಿ ಪಡೆದ ಅಭ್ಯರ್ಥಿಗಳ ಪೈಕಿ ಶೇ.70ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಒದಗಿಸುವ ಷರತ್ತನ್ನು ತರಬೇತುದಾರ ಸಂಸ್ಥೆಗಳಿಗೆ ವಿಧಿಸಲಾಗಿರುತ್ತದೆ ಹಾಗೂ ಜಿಲ್ಲಾ ಮಟ್ಟದಲ್ಲಿ ನಡೆಸಲಾಗುವ ಉದ್ಯೋಗ ಮೇಳಗಳ ಮೂಲಕವೂ ತರಬೇತಿ ಪಡೆದ ಅಭ್ಯರ್ಥಿಗಳು ಉದ್ಯೋಗಾವಕಾಶವನ್ನು ಪಡೆಯಬಹುದಾಗಿದೆ.<br><br>(ಕೌಶಲ್ಯ ಸಂಪರ್ಕ) ಪೋರ್ಟಲ್ Skill Connect: ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಆಸಕ್ತ ಉದ್ಯೋಗದಾತರು ಹಾಗೂ ಉದ್ಯೋಗಕಾಂಕ್ಷಿಗಳನ್ನು ಒಂದೇ ವೇದಿಕೆಯಡಿ ತರಲು (ಕೌಶಲ್ಯ ಸಂಪರ್ಕ) ಪೋರ್ಟಲ್ Skill Connect: ಅನ್ನು ಕಾರ್ಯಗತಗೊಳಿಸಲಾಗಿದೆ. ಸದರಿ ಪೋರ್ಟಲ್‌ನಡಿ 109037ಕ್ಕೂ ಅಧಿಕ ಉದ್ಯೋಗಾವಕಾಶಗಳನ್ನು ಒಳಗೊಂಡಂತೆ ಶಿಶಿಕ್ಷು ತರಬೇತಿಯ ಅವಕಾಶಗಳು ಲಭ್ಯವಿದ್ದು, 795ಕ್ಕೂ ಅಧಿಕ ಕಂಪನಿಗಳು ಹಾಗೂ ಭಾಗಿದಾರತ್ವ ಸಂಸ್ಥೆಗಳನ್ನು ಒಳಗೊಂಡಿದ್ದು, 96532 ಅಭ್ಯರ್ಥಿಗಳು ನೋಂದಣಿಗೊಂಡಿರುತ್ತಾರೆ.<br><br>• Industry conclaves:ಐ.ಟಿ., ಲಾಜಿಸ್ಟಿಕ್ಸ್, ಕೃಷಿ ವಲಯಗಳ ಕೈಗಾರಿಕೆಗಳೊಂದಿಗೆ ಸಂವಾದಗಳನ್ನು ನಡೆಸಲಾಗಿದೆ. |

| | |
|---|---|
| | ಉದ್ಯೋಗ ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾದ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿ, ಕೈಗಾರಿಕೆಗಳಿ ಸರ್ಕಾರದಿಂದ ತರಬೇತಿ ಸಂಸ್ಥೆಗಳಾಗಿ ಮಾನ್ಯತೆ ಪಡೆಯುವ ಅವಕಾಶದ ಕುರಿತು ಮಾಹಿತಿ ನೀಡಿ, ಉತ್ತೇಜಿಸುವುದು ಈ ಕಾರ್ಯಕ್ರಮಗಳ ಉದ್ದೇಶವಾಗಿದೆ.<br><br>• Industry Connect (Demand Driven Training): Industry Connect ಕಾರ್ಯಕ್ರಮದ ಮೂಲಕ Industry Linkage Cell ಸ್ಥಾಪಿಸಲಾಗಿದ್ದು, ಕೈಗಾರಿಕೆಗಳನ್ನು ತರಬೇತಿ ಪಾಲುದಾರರನ್ನಾಗಿ ಮಾಡಿ ಅವರದೇ ತರಬೇತಿ ಕೇಂದ್ರಗಳ ಮೂಲಕ ಔದ್ಯೋಗಿಕ ಬೇಡಿಕೆಗಳ ಅನುಸಾರವಾಗಿ ಕೌಶಲ್ಯ ತರಬೇತಿ ನೀಡಿ ಉದ್ಯೋಗ ಒದಗಿಸಿ, ಕ್ರಮಕೈಗೊಳ್ಳಲಾಗುತ್ತಿದೆ.<br><br>**ಸಿಡಾಕ್**<br><br>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ- ಸಿಡಾಕ್ ಸಂಸ್ಥೆಯು ವಿವಿಧ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ತರಬೇತಿಗೊಂಡ ಅಭ್ಯರ್ಥಿಗಳು ಸ್ವಯಂ ಉದ್ಯೋಗಿಗಳಾಗುವ ಅವಕಾಶವಿರುತ್ತದೆ. |
| (ಇ) ಈ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೈಗೊಂಡಿರುವ ಯೋಜನೆ/ಕಾರ್ಯಕ್ರಮಗಳು ಯಾವುವು; ಇದಕ್ಕೆ ಬಿಡುಗಡೆಯಾಗಿರುವ ಅನುದಾನ ಎಷ್ಟು; ಖರ್ಚಾಗಿರುವ ಅನುದಾನ ಎಷ್ಟು; ಈ ಯೋಜನೆ/ಕಾರ್ಯಕ್ರಮದಡಿಯಲ್ಲಿ ಉದ್ಯೋಗ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; ಯೋಜನೆ/ಕಾರ್ಯಕ್ರಮವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | **ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ**<br><br>ಕಳೆದ ಮೂರು ವರ್ಷಗಳಲ್ಲಿ 2021-22, 2022-23 ಮತ್ತು 2023-24ರಲ್ಲಿ ಇಲಾಖೆಯ ಉದ್ಯೋಗ ವಿಭಾಗದಲ್ಲಿ ಉದ್ಯೋಗ ಮೇಳ, ಸ್ಟಡಿ ಸರ್ಕಲ್ ಆಯೋಜನೆ ಹಾಗೂ ಕಲಬುರ್ಗಿ, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಮಾದರಿ ವೃತ್ತಿ ಕೇಂದ್ರಗಳ ಸ್ಥಾಪನೆ ಹಾಗೂ 2023-24 ರಿಂದ ಯುವನಿಧಿ ಯೋಜನೆ ಅನುಷ್ಠಾನಗಳಂತೆ ಕಾರ್ಯಕ್ರಮಗಳು ಜಾರಿಯಲ್ಲಿರುತ್ತದೆ.<br><br>ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ, ಖರ್ಚಾದ ಅನುದಾನ, ಸ್ಟಡಿ ಸರ್ಕಲ್‌ನಲ್ಲಿ ಭಾಗವಹಿಸಿದ ಅಭ್ಯರ್ಥಿಗಳು, ಉದ್ಯೋಗ ಮೇಳದಲ್ಲಿ ಉದ್ಯೋಗ ಪತ್ರ ಪಡೆದ ಫಲಾನುಭವಿಗಳ ಅಂಕಿಅಂಶಗಳನ್ನು **ಅನುಬಂಧ-1**ರಲ್ಲಿ ನೀಡಿದೆ.<br><br>2023-24ರಲ್ಲಿ ಯವನಿಧಿ ಯೋಜನೆಗೆ ಸಂಬಂಧಿಸಿದಂತೆ ನೇರ ನಗದು ವರ್ಗಾವಣೆ ಮೂಲಕ ನಿರುದ್ಯೋಗ ಭತ್ಯೆ ಪಡೆದ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳ ಜಿಲ್ಲಾವಾರು/ತಾಲ್ಲೂಕುವಾರು ವ್ಯಾಸಂಗವಾರು ಮಹಿಳಾ/ಪುರುಷ ಅಭ್ಯರ್ಥಿಗಳ ಅಂಕಿ-ಅಂಶಗಳನ್ನು **ಅನುಬಂಧ-2**ರಲ್ಲಿ ನೀಡಿದೆ.<br><br>**ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ**<br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಯಾವುದೇ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುವುದಿಲ್ಲ. ಆದಾಗ್ಯೂ ರಾಜ್ಯದಾದ್ಯಂತ |

|  | ಜಾರಿಗೊಳಿಸಲಾದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಈ ಕೆಳಕಂಡಂತೆ ಅಭ್ಯರ್ಥಿಗಳಿಗೆ ನೀಡಲಾದ ಕೌಶಲ್ಯ ತರಬೇತಿಗೆ, ತರಬೇತಿ ವೆಚ್ಚದ ರೂಪದಲ್ಲಿ ತರಬೇತಿ ಸಂಸ್ಥೆಗಳಿಗೆ ಬಿಡುಗಡೆಗೊಳಿಸಲಾಗಿರುತ್ತದೆ. |
|---|---|

| ಕ್ರ.ಸಂ | ಜಿಲ್ಲೆ | ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | ಬಿಡುಗಡೆಗೊಳಿಸಿದ ತರಬೇತಿ ವೆಚ್ಚದ ಮೊತ್ತ (ರೂ.ಗಳಲ್ಲಿ) |
|---|---|---|---|
| 01 | ಬೀದರ್ | 3270 | 3,34,49,067 |
| 02 | ಕಲಬುರ್ಗಿ | 5605 | 5,64,00,294 |
| 03 | ರಾಯಚೂರು | 3237 | 3,13,65,373 |
| 04 | ಯಾದಗಿರಿ | 3510 | 3,24,15,733 |
| 05 | ಬಳ್ಳಾರಿ | 3045 | 2,99,20,423 |
| 06 | ಕೊಪ್ಪಳ | 4492 | 4,49,53,932 |
| | ಒಟ್ಟು | 23159 | 22,85,04,822 |

ಅದರಂತೆ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ ಈ ಕೆಳಕಂಡಂತೆ ಅಭ್ಯರ್ಥಿಗಳಿಗೆ ನೀಡಲಾದ ಕೌಶಲ್ಯ ತರಬೇತಿಗೆ, ತರಬೇತಿ ವೆಚ್ಚದ ರೂಪದಲ್ಲಿ ತರಬೇತಿ ಸಂಸ್ಥೆಗಳಿಗೆ ಬಿಡುಗಡೆಗೊಳಿಸಲಾಗಿರುತ್ತದೆ.

| ಕ್ರ.ಸಂ | ಜಿಲ್ಲೆ | ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | ಬಿಡುಗಡೆಗೊಳಿಸಿದ ತರಬೇತಿ ವೆಚ್ಚದ ಮೊತ್ತ (ರೂ.ಗಳಲ್ಲಿ) |
|---|---|---|---|
| 01 | ಬೀದರ್ | 741 | 31,06,640 |
| 02 | ಕಲಬುರ್ಗಿ | 1378 | 62,63,242 |
| 03 | ರಾಯಚೂರು | 525 | 11,48,754 |
| 04 | ಯಾದಗಿರಿ | 515 | 16,97,888 |
| 05 | ಬಳ್ಳಾರಿ | 561 | 23,44,129 |
| 06 | ಕೊಪ್ಪಳ | 966 | 36,81,730 |
| | ಒಟ್ಟು | **4686** | **1,82,42,383** |

| | |
|---|---|
| | <u>ಸಿಡಾಕ್</u><br><br>ಕಳೆದ ಮೂರು ವರ್ಷಗಳಲ್ಲಿ ಸಿಡಾಕ್ ಸಂಸ್ಥೆಯು ನಿರುದ್ಯೋ. ಯುವಕ/ಯುವತಿಯನ್ನು ಸ್ವಯಂ ಉದ್ಯೋಗದತ್ತ ಸೆಳೆಯಲು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br><br>1. ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರಗಳು<br>2. ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕಾ ತರಬೇತಿ<br>3. ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು<br>4. ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು |
| (ಈ) ರಾಜ್ಯದಲ್ಲಿ ಐಟಿ ಬಿಟಿ ಹಾಗೂ ಇತರೆ ಉದ್ಯಮಗಳು ಮುಖ್ಯವಾಗಿ ಬೆಂಗಳೂರು ಹಾಗೂ ಇತರೆ ನಗರ ಕೇಂದ್ರಿತವಾಗಿ ಸ್ಥಾಪನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅದರಿಂದ ವಲಸೆ ಹೆಚ್ಚಾಗಿ ನಗರಗಳಲ್ಲಿ ಜನದಟ್ಟಣೆ ಹೆಚ್ಚಾಗಿ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸುವುದು ಸವಾಲಾಗಿರುವುದು ನಿಜವೇ; ಹಾಗಿದ್ದಲ್ಲಿ, ಇದರ ನಿವಾರಣೆಗಾಗಿ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | <u>ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ</u><br><br>ಹೌದು.<br><br>ರಾಜ್ಯದಲ್ಲಿ ಐಟಿ-ಬಿಟಿ ಹಾಗೂ ಇತರೆ ಉದ್ಯಮಗಳು ಮುಖ್ಯವಾಗಿ ಬೆಂಗಳೂರು ಹಾಗೂ ಇತರೆ ನಗರ ಕೇಂದ್ರಿತವಾಗಿ ಸ್ಥಾಪನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ವಲಸೆ ಹೆಚ್ಚಾಗಿ ನಗರಗಳಲ್ಲಿ ಜನದಟ್ಟಣೆ ಹೆಚ್ಚಾಗಿ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಸವಾಲಾಗುವುದನ್ನು ತಪ್ಪಿಸುವ ಸಲುವಾಗಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಐಟಿ, ಬಿಟಿ ಹಾಗು ಇತರೆ ಉದ್ಯಮಗಳ ಸ್ಥಾಪನೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ:-<br><br><u>ಮಾಹಿತಿ ತಂತ್ರಜ್ಞಾನ ವಲಯ</u>:-<br><br>• ಶಿವಮೊಗ್ಗ, ಕಲಬುರ್ಗಿ ಹಾಗೂ ಹುಬ್ಬಳ್ಳಿಯಲ್ಲಿ ಕಿಯೋನಿಕ್ಸ್ ಮುಖಾಂತರ ಐಟಿ ಪಾರ್ಕ್ ಅನ್ನು ಸ್ಥಾಪಿಸಲಾಗಿದೆ.<br>• ಧಾರವಾಡ ಹಾಗೂ ರಾಯಚೂರಿನಲ್ಲಿ ಐಐಐಟಿ ಸ್ಥಾಪನೆಗೆ ಸರ್ಕಾರದ ವತಿಯಿಂದ ಐಟಿ ಕ್ಷೇತ್ರದಲ್ಲಿ ಉನ್ನತ ಶಿಕ್ಷಣಕ್ಕೆ ಒತ್ತು ಕೊಟ್ಟು ಅನುದಾನ ಕಲ್ಪಿಸಲಾಗಿದೆ.<br><br><u>ಮಾಹಿತಿ ತಂತ್ರಜ್ಞಾನ 2020-25 ನೀತಿಯಡಿಯಲ್ಲಿ ವಲಯ-3ಕ್ಕೆ ಹೊರತಾದ ಪ್ರದೇಶಗಳಲ್ಲಿ (ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ) ಈ ಕೆಳಕಂಡ ಸವಲತ್ತುಗಳನ್ನು ನೀಡಲಾಗುತ್ತಿದೆ:-</u><br><br>• ಮಾಹಿತಿ ತಂತ್ರಜ್ಞಾನ ವಲಯ/ಕ್ಲಸ್ಟರ್ ಸ್ಥಾಪನೆಗೆ ರೂ.3.00 (ಮೂರು) ಕೋಟಿಗಳವರೆಗೂ ಹಣಕಾಸಿನ ನೆರವು<br>• ಪ್ರತಿ ಚದರ ಅಡಿಗೆ ರೂ.10ರ ದರದಲ್ಲಿ ಗರಿಷ್ಠ ರೂ.3.00(ಮೂರು) ಲಕ್ಷದವರೆಗೆ ಗುತ್ತಿಗೆ/ಬಾಡಿಗೆ ಮರುಪಾವತಿ<br>• ಘಟಕಗಳಿಗೆ ವಿದ್ಯುತ್ ದರಗಳಲ್ಲಿ ರಿಯಾಯಿತಿ |

- ಸಂಘಟನಾ ಕಾರ್ಯಸ್ಥಾನಗಳು (ಕೋವರ್ಕಿಂಗ್ ಸ್ಪೇಸ್) ಬಳಕೆಗೆ ಸಂಪೂರ್ಣ ಸನ್ನದಗೊಂಡ (ಪ್ಲಗ್ ಅಂಡ್ ಪ್ಲೇ) ಮೂಲಸೌಕರ್ಯಗಳಿಗಾಗಿ ರೂ.2.00 (ಎರಡು)ಕೋಟಿಗಳವರೆಗೆ ಹಣಕಾಸು ನೆರವು
- ಮೈಸೂರು, ಹುಬ್ಬಳ್ಳಿ ಧಾರವಾಡ ಹಾಗೂ ಮಂಗಳೂರಿನಲ್ಲಿ ಶೇ.75ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ ವಲಯ-3ಕ್ಕೆ ಹೊರತುಪಡಿಸಿ ಬೇರೆ ಎಲಾ ವಲಯಗಳಲ್ಲಿ ಶೇ.100ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ.

<u>ಜೈವಿಕ ತಂತ್ರಜ್ಞಾನ ವಲಯ:</u>

ಜೈವಿಕ ತಂತ್ರಜ್ಞಾನ ವಲಯಕ್ಕಾಗಿ ಸರ್ಕಾರವು ಪ್ರಕಟಿಸಿರುವ ಜೈವಿಕ ತಂತ್ರಜ್ಞಾನ ನೀತಿ 3.0ರಲ್ಲಿ ರಾಜ್ಯದಾದ್ಯಂತ ಸ್ಥಾಪಿಸುವ ಜೈವಿಕ ತಂತ್ರಜ್ಞಾನ ಕಂಪನಿಗಳಿಗೆ ಈ ಕೆಳಕಂಡ ಹಣಕಾಸಿನ ಪ್ರೋತ್ಸಾಹಗಳು ಹಾಗೂ ರಿಯಾಯಿತಿಗಳನ್ನು ಒದಗಿಸಲಾಗುವುದು:-

- ಉಪಘಟಕಕ್ಕೆ ಸಬ್ಸಿಡಿ.
- ರೂ.1.00 (ಒಂದು)ಲಕ್ಷದವರೆಗೆ ಯೋಜನೆಯ ಕಾರ್ಯ ಯೋಜನೆ ತಯಾರಿಕೆ ವೆಚ್ಚದ ಮರುಪಾವತಿ
- ಸಂಶೋಧನಾಭಿವೃದ್ಧಿ ಘಟಕಗಳಿಗೆ ವಿದ್ಯುತ್ ದರಗಳಲ್ಲಿ ರಿಯಾಯಿತಿ.
- ತಂತ್ರಜ್ಞಾನ ಉನ್ನತೀಕರಣಕ್ಕಾಗಿ ಪಡೆದುಕೊಂಡ ಗರಿಷ್ಠ ರೂ.50.00 (ಐವತ್ತು)ಲಕ್ಷಗಳವರೆಗಿನ ಸಾಲದ ಬಡ್ಡಿಗೆ ಶೇ.6ರಷ್ಟು ಸಬ್ಸಿಡಿ
- ISO/BIS/NABL/GMP/GLP ಪ್ರಮಾಣೀಕರಣಗಳನ್ನು ಪಡೆಯಲು ಆರ್ಥಿಕ ಸಹಾಯ
- ಭಾರದಲ್ಲಿ ಮತ್ತು ವಿದೇಶದಲ್ಲಿ ಪೇಟೆಂಟ್ ನೋಂದಣಿಗಾಗಿ ಆರ್ಥಿಕ ಸಹಾಯ
- ಅಂತರಾಷ್ಟ್ರೀಯ ಮಾರ್ಕೆಟಿಂಗ್ ಪ್ರಚುರ ಕಾರ್ಯಕೈಗೊಳ್ಳಲು ಮಾರ್ಕೆಟಿಂಗ್ ಪ್ರೋತ್ಸಾಹಕ

<u>ಇಎಸ್‌ಡಿಎಮ್ ವಲಯ:</u>

- ಮೈಸೂರಿನಲ್ಲಿ ಎಲೆಕ್ಟ್ರಾನಿಕ್ಸ್ ಉದ್ಯಮಕ್ಕೆ ಅನುಕೂಲವಾಗುವಂತೆ ಬ್ರೌನ್‌ಫೀಲ್ಡ್ ಇಎಸ್‌ಡಿಎಮ್ ಕ್ಲಸ್ಟರ್ 'ಲಹರಿ' ಅನ್ನು ಸ್ಥಾಪಿಸಲಾಗಿದೆ.
- ಉತ್ತರ ಕರ್ನಾಟಕದಲ್ಲಿ VLSI & ESDM ನವೋದ್ಯಮಗಳಿಗೆ ವರ್ಧನೆ ನೀಡುವ ದಾರ್ಶನಿಕತೆಯೊಂದಿಗೆ ಹುಬ್ಬಳ್ಳಿಯಲ್ಲಿ HEX (VLSI ಪರಿಪೋಷಣಾ ಕೇಂದ್ರವನ್ನು) ಯೋಜನೆಯನ್ನು ಪ್ರಾರಂಭಿಸಲಾಗಿದೆ.
- ಕರ್ನಾಟಕದಲ್ಲಿ ಎಲೆಕ್ಟ್ರಾನಿಕ್ಸ್ ಮ್ಯಾನುಫ್ಯಾಕ್ಚರಿಂಗ್ ಕ್ಲಸ್ಟರ್ ("EMC") ಯೋಜನೆಯನ್ನು ಧಾರವಾಡ

| | |
|---|---|
| | ಜಿಲ್ಲೆಯಲ್ಲಿ (ಕೋಟೂರು-ಬೇಲೂರು ಕೈಗಾರಿಕಾ ಪ್ರದೇಶ) ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ನವೋದ್ಯಮ ವಲಯ:<br><br>• ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ನಾವೀನ್ಯತೆ ಹಾಗೂ ಅವಿಷ್ಕಾರಗಳನ್ನು ಅಭಿವೃದ್ಧಿಪಡಿಸಲು 30 ಇಂಜಿನಿಯರಿಂಗ್ ವಿದ್ಯಾಸಂಸ್ಥೆಗಳಲ್ಲಿ "ನ್ಯೂ ಏಜ್ ಇನ್ನೋವೇಶನ್ ನೆಟ್‌ವರ್ಕ್' ಅನ್ನು ಸ್ಥಾಪಿಸಲಾಗಿದೆ.<br>• ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿರುವ ನವೋದ್ಯಮಿಗಳಿಗೆ ಪ್ರತ್ಯೇಕವಾಗಿ ಎಲಿವೇಟ್ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಹಾಗೂ 19 ನವೋದ್ಯಮಗಳಿಗೆ ರೂ.200.00ಲಕ್ಷಗಳ ನೀಡಲಾಗಿದೆ.<br>• Elevate ಕಾರ್ಯಕ್ರಮದಡಿಯಲ್ಲಿ, ಬೆಂಗಳೂರಿನಾಚೆಯಿರುವ 75 ಸ್ಟಾರ್ಟ್‌ಅಪ್‌ಗಳಿಗೆ ರೂ.844 ಲಕ್ಷ ಅನುದಾನ ನೀಡಿ ಪ್ರೋತ್ಸಾಹಿಸಲಾಗಿದೆ.<br>• ಮಂಗಳೂರಿನಲ್ಲಿ ತಂತ್ರಜ್ಞಾನ ಕಂಪನಿಗಳ ಉಪಯೋಗಕ್ಕಾಗಿ ಕೆ-ಟೆಕ್ ಇನ್ನೋವೇಷನ್ ಹಬ್ ಹಾಗೂ ಸರ್ವಬಳಕೆಯ ಸಲಕರಣೆಗಳ ಸೌಲಭ್ಯ (Common Instrumentation Facility (CIF) ) ವನ್ನು ಕಿಟ್ಸ್ ಸಂಸ್ಥೆಯ ವತಿಯಿಂದ ಸ್ಥಾಪಿಸಲಾಗಿದೆ.<br>• ವಾರ್ಷಿಕ ರಾಜ್ಯ ಜಿಎಸ್‌ಟಿಯನ್ನು ಬೆಂಗಳೂರು ಹೊರತುಪಡಿಸಿ, ರಾಜ್ಯದ ಇತರೆ ಸ್ಟಾರ್ಟ್‌ಅಪ್‌ಗಳಿಗೆ ಹಿಂಭರಿಸುವಿಕೆ<br><br>ಎವಿಜಿಸಿ ವಲಯ:<br><br>• ಬೆಂಗಳೂರು ಹೊರತುಪಡಿಸಿ ರಾಜ್ಯದ 13 ಜಿಲ್ಲೆಗಳಲ್ಲಿ ಎವಿಜಿಸಿ ವಲಯದಲ್ಲಿ ಆಸಕ್ತಿಯುಳ್ಳ ಯುವಕ ಯವತಿಯರಿಗಾಗಿ ಹಾಗೂ ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್ ವಿದ್ಯಾರ್ಥಿಗಳಿಗಾಗಿ ಸುಮಾರು 24 ಡಿಜಿಟಲ್ ಆರ್ಟ್ ಸೆಂಟರ್ ಅನ್ನು ಸ್ಥಾಪಿಸಲಾಗಿದೆ.<br>• ಕೆಡಿಇಎಮ್ ಸಂಸ್ಥೆ ವತಿಯಿಂದ ಬಿಯಾಂಡ್ ಬೆಂಗಳೂರು ಕಾರ್ಯಕ್ರಮದಲ್ಲಿ ಮೈಸೂರು, ಮಂಗಳೂರು, ಕಲಬುರ್ಗಿ, ತುಮಕೂರು, ಶಿವಮೊಗ್ಗ ಹಾಗೂ ಹುಬ್ಬಳ್ಳಿಗಳಲ್ಲಿ IT/ESDM/Startups/AVGC ಉದ್ಯಮಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ಮೈಸೂರಿನ KSOU, ಮಂಡಕಳ್ಳಿಯಲ್ಲಿ Global Technology Centreಅನ್ನು ಸ್ಥಾಪಿಸಲಾಗುತ್ತಿದೆ.<br>• Karnataka Acceleration Neetwork ಯೋಜನೆಯಡಿಯಲ್ಲಿ ಮೈಸೂರು, ಹುಬ್ಬಳ್ಳಿ-ಧಾರವಾಡ ಹಾಗೂ ಮಂಗಳೂರಿನಲ್ಲಿ ಸ್ಟಾರ್ಟ್‌ಅಪ್‌ಗಳ ಅಗತ್ಯತೆಗನುಗುಣವಾಗಿ ಸಲಹೆಗಾರರನ್ನು ಗುರುತಿಸಿ |

| | |
|---|---|
| | Acceleration Programಅನ್ನು ಆಯೋಜಿಸಲು ಕ್ರಮ ತೆಗೆದುಕೊಳ್ಳಲಾಗಿದೆ.<br>• ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ವಲಯಗಳ ಹೂಡಿಕೆ ಮತ್ತು ಕೌಶಲ್ಯಗಳನ್ನು ಬೆಂಗಳೂರಿನಾಚೆ ವಿಸ್ತರಿಸುವ ಮಹಾದುದ್ದೇಶದ ಬಿಯಾಂಡ್ ಬೆಂಗಳೂರು ಸಮಾವೇಶಗಳನ್ನು ಬೆಂಗಳೂರು ಟೆಕ್ ಸಮ್ಮಿಟ್ ಅಂಗವಾಗಿ ಆಯೋಜಿಸಿ IT/ESDM/Startups/AVGC ಉದ್ಯಮಗಳನ್ನು ಉತ್ತೇಜಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>**<u>ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ</u>**<br><br>ಸರ್ಕಾರದ ಗಮನಕ್ಕೆ ಬಂದಿದೆ.<br><br>ವಲಸೆ ಹೆಚ್ಚಾಗಿ ನಗರಗಳಲ್ಲಿ ಜನದಟ್ಟಣೆ ಹೆಚ್ಚಾಗಿ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸುವುದು ಸವಾಲಾಗಿದ್ದು, ಇದರ ಕೈಗಾರಿಕೆಗಳ ಸಮಗ್ರ ಬೆಳವಣಿಗಾಗಿ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ, ಸ್ಥಳೀಯರಿಗೆ ಹೆಚ್ಚನಿ ಉದ್ಯೋಗಾವಕಾಶ ಕಲ್ಪಿಸಲು ಈ ಕೆಳಕಂಡ ವಿಶೇಷ ಆರ್ಥಿಕ ಕೈಗಾರಿಕಾ ಕಾರಿಡಾರ್‌ಗಳನ್ನು ಅಭಿವೃದ್ಧಿ ಮತ್ತು ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ.<br><br>• ಚೆನ್ನೈ-ಬೆಂಗಳೂರು ಕೈಗಾರಿಕಾ ಕಾರಿಡಾರ್ (CBIC)-ಕಾರಿಡಾರ್ ಯೋಜನೆಯಡಿ ತುಮಕೂರು ಜಿಲ್ಲೆಯ ವಸಂತ ನರಸಾಪುರ ಕೈಗಾರಿಕಾ ಪ್ರದೇಶದ ಹತ್ತಿರ ಮೊದಲ ಹಂತದಲ್ಲಿ 1700 ಎಕರೆ ಪ್ರದೇಶದಲ್ಲಿ ಕೇಂದ್ರ ಸರ್ಕಾರದ ಸಹಯೋಜನೆಯಡಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡೆಸಲಾಗುತ್ತಿದೆ. ಈ ಯೋಜನೆಯಿಂದ ಅಂದಾಜು 30,000 ಕೋಟಿ ಬಂಡವಾಳ ಹೂಡಿಕೆಯಾದಲ್ಲಿ ಅಂದಾಜು 25,000 ಉದ್ಯೋಗ ಸೃಜನೆಯಾಗುತ್ತದೆ.<br>• ತುಮಕೂರು ಕೈಗಾರಿಕಾ ಜಾಲ- ವಸಂತನರಸಾಪುರ ಕೈಗಾರಿಕಾ ಪ್ರದೇಶ ಹಂತ-II ರಲ್ಲಿ ತುಮಕೂರು ಮಷಿನ್ ಟೂಲ್ ಪಾರ್ಕ್ ಮತ್ತು ಜಪಾನೀಸ್ ಇಂಡಸ್ಟ್ರಿಯಲ್ ಟೌನ್‌ಶಿಪ್ ಎರಡು ವಿಶೇಷ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ.<br>• ಧಾರವಾಡ ವಿಶೇಷ ಹೂಡಿಕೆ ಪ್ರದೇಶ (ಎಸ್‌ಐಆರ್)- ವಿಶ್ವದರ್ಜೆಯ ಸೇವೆಗಳ ಮತ್ತು ಮೂಲಸೌಕರ್ಯಗಳ ಬೆಂಬಲದೊಂದಿಗೆ ಉತ್ಕೃಷ್ಟ ನಾಗರಿಕ ಸೌಕರ್ಯಗಳು, ಉನ್ನತ ಕೇಂದ್ರಗಳು ಹಾಗೂ ಕ್ರಿಯಾಶಿಲ ನೀತಿಗಳ ಚೌಕಟ್ಟುಗಳೊಂದಿಗೆ ಇವುಗಳನ್ನು ನಿರ್ಮಿಸಿ, ಅಭಿವೃದ್ಧಿಪಡಿಸಿ, ನಿರ್ವಹಿಸಿ ಮತ್ತು ನಿಯಂತ್ರಿಸಲು ಪ್ರಸ್ತಾಪಿಸಲಾಗಿದೆ.<br>• ಉತ್ಪನ್ನಗಳ ಕೈಗಾರಿಕಾ ಕ್ಲಸ್ಟರ್‌ಗಳನ್ನು ಉತ್ತೇಜಿಸಲು 4 ಕ್ಲಸ್ಟರ್‌ಗಳಿಗೆ ವಿಶೇಷ ಪ್ರೋತ್ಸಾಹ ಪ್ಯಾಕೇಜ್‌ಗಳನ್ನು ಘೋಷಿಸಲಾಗಿದೆ. |

| | |
|---|---|
| | 1. ಗೊಂಬೆ ತಯಾರಿಕಾ ಕ್ಲಸ್ಟರ್ - ಕೊಪ್ಪಳ ಜಿಲ್ಲೆ.<br>2.ಜವಳಿ ಉತ್ಪನ್ನಗಳ ಕ್ಲಸ್ಟರ್-ಬಳ್ಳಾರಿ ಜಿಲ್ಲೆ<br>3.ಕೃಷಿ ಉಪಕರಣಗಳ ಕ್ಲಸ್ಟರ್-ಬೀದರ್ ಜಿಲ್ಲೆ.<br>4.ಎಫ್.ಎಂ.ಸಿ.ಜಿ ಉತ್ಪನ್ನಗಳ ಕ್ಲಸ್ಟರ್-ಧಾರವಾಡ<br><br>ಪ್ರಾದೇಶಿಕ ಅಭಿವೃದ್ಧಿ ಜೊತೆಗೆ ರಾಜ್ಯದಲ್ಲಿ ಸಮತೋಲನ ಹೊಂದಿದ ಹೂಡಿಕೆ ಖಾತರಿಪಡಿಸುವುದು ರಾಜ್ಯದ ಪ್ರಮುಖ ಜವಾಬ್ದಾರಿಯಾಗಿದೆ. ಕಲ್ಯಾಣ ಕರ್ನಾಟಕ ಸೇರಿದಂತೆ ಉತ್ತರ ಕರ್ನಾಟಕದ ಎರಡನೇ ಮತ್ತು ಮೂರನೇ ಸ್ತರದ ನಗರಗಳಿಗೆ ಹೆಚ್ಚಿನ ಉತ್ತೇಜನ ನೀಡಲಿದ್ದು, ಕೈಗಾರಿಕೆಗಳಿಗೆ ಅನುಕೂಲವಾಗುವ ವಾತಾವರಣ/ಪರಿಸರ ನಿರ್ಮಾಣ, ಮೂಲಸೌಲಭ್ಯ ಅಭಿವೃದ್ಧಿ, ಈ ಭಾಗದ ಜನರಿಗೆ ನ್ಯಾಯಯುತವಾದ ಅವಕಾಶಗಳನ್ನು ನೀಡಲಿದೆ.<br><br>ಎಲ್ಲಾ ಉತ್ಪಾದನಾ ವಲಯಗಳಲ್ಲಿ ಅದರಲ್ಲೂ ಆಟೋಮೊಬೈಲ್ಸ್ (ವಾಹನ) ಮತ್ತು ವಾಹನ ಬಿಡಿಭಾಗಗಳು, ಔಷಧ (ಫಾರ್ಮಾಸ್ಯುಟಿಕಲ್ಸ್) ಮತ್ತು ವೈದ್ಯಕೀಯ ಉಪಕರಣಗಳು, ಎಂಜಿನಿಯರಿಂಗ್ ಮತ್ತು ಯಂತ್ರೋಪಕರಣಗಳು (ಮಷೀನ್ ಟೂಲ್ಸ್), ಜ್ಞಾನ ಆಧಾರಿತ ಕೈಗಾರಿಕೆಗಳು, ಸಿಮೆಂಟ್, ಉಕ್ಕು, ಸಕ್ಕರೆ, ಸರಕು ಸಾಗಣೆ, ನವೀಕರಿಸಬಹುದಾದ ಇಂಧನ, ವೈಮಾನಿಕ ತಂತ್ರಜ್ಞಾನ ಮತ್ತು ರಕ್ಷಣೆ (ಏರೋಸ್ಪೇಸ್ ಮತ್ತು ಡಿಫೆನ್ಸ್) ಹಾಗೂ ಉನ್ನತ ಶಿಕ್ಷಣಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಸರ್ಕಾರವು ಸಮಗ್ರ ಗುರಿ ಕೇಂದ್ರಿತ ಕೈಗಾರಿಕಾ ನೀತಿ ಜಾರಿತರಲಿದೆ. ಈ ಮೂಲಕ ನೂತನ ನೀತಿಯು ಒಟ್ಟು ಉತ್ಪಾದನಾ ಪರಿಸರವನ್ನೇ ಬದಲಿಸುವ ಮತ್ತು ಕೈಗಾರಿಕೆ ಬೆಳವಣಿಗೆಯ ವಾಹಕವಾಗಿ ಪಾತ್ರ ನಿರ್ವಹಿಸುವಂತಾಗಲಿದೆ. |

ಸಂಖ್ಯೆ: ಕೌಉಜೀಇ 07 ಕೌಗುಪ್ರ 2024

**(ಡಾ. ಶರಣಪ್ರಕಾಶ ಆರ್ ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.

# ಅನುಬಂಧ-1

| ವರ್ಷ | ಯುವನಿಧಿ ಯೋಜನೆ | | | ಸ್ಟಡಿ ಸರ್ಕಲ್ | | | ಉದ್ಯೋಗ ಮೇಳ | | | ಮಾದರಿ ವೃತ್ತಿ ಕೇಂದ್ರಗಳು | | |
|---|---|---|---|---|---|---|---|---|---|---|---|---|
| | ಅನುದಾನ ರೂ.ಗಳಲ್ಲಿ | ಖರ್ಚು ರೂ.ಗಳಲ್ಲಿ | ಫಲಾನುಭವಿಗಳು | ಅನುದಾನ ರೂ.ಗಳಲ್ಲಿ | ಖರ್ಚು ರೂ.ಗಳಲ್ಲಿ | ಫಲಾನುಭವಿಗಳು | ಅನುದಾನ ರೂ.ಗಳಲ್ಲಿ | ಖರ್ಚು ರೂ.ಗಳಲ್ಲಿ | ಫಲಾನುಭವಿಗಳು | ಅನುದಾನ ರೂ. ಲಕ್ಷಗಳಲ್ಲಿ | ಖರ್ಚು ರೂ.ಗಳಲ್ಲಿ | ಫಲಾನುಭವಿಗಳು |
| 2021–22 | ಯೋಜನೆಯು 2023–24ನೇ ಸಾಲಿನಲ್ಲಿ ಪ್ರಾರಂಭಗೊಂಡಿರುತ್ತದೆ. | | | 52,000 | 50,850 | 52 | 45,000 | 45,000 | 773 | 39.51 | 37.28 | ** -- |
| 2022–23 | | | | 52,000 | 43,500 | 198 | 3,72,000 | 3,72,000 | 3601 | 12.64 | 12.64 | -- |
| 2023–24 | * | 75616500.00 | 25285 | 78,000 | 78,000 | 137 | -- | -- | 1485 | *** ಅನುದಾನ ಬಿಡುಗಡೆಯಾಗಿರುವುದಿಲ್ಲ | | |

* 1) ಯುವನಿಧಿ ಯೋಜನೆಯ ಅನುದಾನವನ್ನು ಅಧೀನ ಕಚೇರಿಗಳಿಗೆ ಹಂಚಿಕೆ ಮಾಡದೆ, ಆಯುಕ್ತಾಲಯದಲ್ಲಿ ನೇರ ವರ್ಗಾವಣೆ ಮೂಲಕ ಫಲಾನುಭವಿಗಳ ಖಾತೆಗೆ ವರ್ಗಾಯಿಸಲಾಗುತ್ತಿದೆ.

** 2) ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳನ್ನು ಮಾದರಿ ವೃತ್ತಿ ಕೇಂದ್ರಗಳಾಗಿ ಪರಿವರ್ತಿಸಲು ಮಾಹಿತಿ ತಂತ್ರಜ್ಞಾನ ಮೂಲ ಸೌಕರ್ಯ, ಸಿವಿಲ್ ಕಾಮಗಾರಿ, ಪೀಠೋಪಕರಣಗಳಿಗಾಗಿ ಕೇಂದ್ರ ಸರ್ಕಾರದಿಂದ ಅನುದಾನವನ್ನು ಬಿಡುಗಡೆಯಾಗಿರುತ್ತದೆ.

***3) ಕೇಂದ್ರ ಪುರಸ್ಕೃತ ಯೋಜನೆಗಳು ಕೇಂದ್ರ ಸರ್ಕಾರದ ಯೋಜನೆಗಳಾಗಿ ಮಾರ್ಪಾಡಾಗಿರುವ ಕಾರಣ ಸ್ಟೇಟ್ ನೋಡಲ್ ಏಜೆನ್ಸಿಯಿಂದ ಉಳಿಕೆ ಅನುದಾನ ಸೆಂಟಲ್ ನೋಡಲ್ ಏಜೆನ್ಸಿಗೆ ವರ್ಗಾಯಿಸಿರುವ ಕಾರಣ 2023–24ನೇ ಸಾಲಿನಲ್ಲಿ ಮಾದರಿ ವೃತ್ತಿ ಕೇಂದ್ರಗಳಿಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ.

ನಿರ್ದೇಶಕರು
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ

| ಕ್ರ.ಸಂ | ಜಿಲ್ಲೆ ಹೆಸರು | | ಡಿಸೆಂಬರ್ 2023 ಸಹಾಯಧನ ಪಡೆದ ಒಟ್ಟು ಫಲಾನುಭವಿಗಳ ಸಂಖ್ಯೆ | | | ಜನವರಿ 2024 ಸಹಾಯಧನ ಪಡೆದ ಒಟ್ಟು ಫಲಾನುಭವಿಗಳ ಸಂಖ್ಯೆ | | | ಫೆಬ್ರವರಿ 2024 ಸಹಾಯಧನ ಪಡೆದ ಒಟ್ಟು ಫಲಾನುಭವಿಗಳ ಸಂಖ್ಯೆ | | |
|---|---|---|---|---|---|---|---|---|---|---|---|
| | | | ಡಿಗ್ರಿ | ಡಿಪ್ಲೊಮ | ಒಟ್ಟು ಮೊತ್ತ | ಡಿಗ್ರಿ | ಡಿಪ್ಲೊಮ | ಒಟ್ಟು ಮೊತ್ತ | ಡಿಗ್ರಿ | ಡಿಪ್ಲೊಮ | ಒಟ್ಟು ಮೊತ್ತ |
| 1 | ಬಳ್ಳಾರಿ | ಬಳ್ಳಾರಿ | 31 | 0 | 93000.00 | 255 | 0 | 765000.00 | 261 | 4 | 789000.00 |
| | | ಕಂಪ್ಲಿ | 4 | 0 | 12000.00 | 30 | 0 | 90000.00 | 38 | 3 | 118500.00 |
| | | ಕುರುಗೋಡು | 7 | 0 | 21000.00 | 44 | 0 | 132000.00 | 47 | 1 | 142500.00 |
| | | ಸಂಡೂರು | 11 | 0 | 33000.00 | 72 | 0 | 216000.00 | 70 | 9 | 223500.00 |
| | | ಸಿರುಗುಪ್ಪ | 25 | 0 | 75000.00 | 87 | 0 | 261000.00 | 98 | 1 | 295500.00 |
| | | ಹಡಗಲಿ | 7 | 0 | 21000.00 | 53 | 0 | 159000.00 | 79 | 2 | 240000.00 |
| | | ಹಗರಿಬೊಮ್ಮನಹಳ್ಳಿ | 7 | 0 | 21000.00 | 37 | 0 | 111000.00 | 41 | 2 | 126000.00 |
| | | ಹರಪ್ಪನಹಳ್ಳಿ | 15 | 0 | 45000.00 | 92 | 0 | 276000.00 | 282 | 5 | 853500.00 |
| | | ಹೊಸಪೇಟೆ | 14 | 0 | 42000.00 | 122 | 0 | 366000.00 | 119 | 12 | 375000.00 |
| | | ಕೊಟ್ಟೂರು | 8 | 0 | 24000.00 | 43 | 0 | 129000.00 | 71 | 1 | 214500.00 |
| | | ಕೂಡ್ಲಿಗಿ | 28 | 0 | 84000.00 | 78 | 0 | 234000.00 | 121 | 0 | 363000.00 |
| | ಒಟ್ಟು | | 157 | 0 | 471000.00 | 913 | 0 | 2739000.00 | 1227 | 40 | 3741000.00 |
| 2 | ಬೀದರ್ | ಔರಾದ್ | 6 | 0 | 18000.00 | 102 | 0 | 306000.00 | 138 | 0 | 414000.00 |
| | | ಬಸವಕಲ್ಯಾಣ | 14 | 1 | 43500.00 | 296 | 1 | 889500.00 | 362 | 1 | 1087500.00 |
| | | ಬಾಲ್ಕಿ | 15 | 0 | 45000.00 | 207 | 0 | 621000.00 | 257 | 0 | 771000.00 |
| | | ಬೀದರ್ | 31 | 0 | 93000.00 | 362 | 0 | 1086000.00 | 431 | 5 | 1300500.00 |
| | | ಚಿತ್ತಗುಪ್ಪ | 4 | 0 | 12000.00 | 85 | 0 | 255000.00 | 103 | 0 | 309000.00 |
| | | ಹುಮ್ನಾಬಾದ್ | 13 | 0 | 39000.00 | 190 | 0 | 570000.00 | 235 | 3 | 709500.00 |
| | | ಹುಲ್‌ಸೂರ್ | 1 | 0 | 3000.00 | 12 | 0 | 36000.00 | 17 | 1 | 52500.00 |
| | | ಕಮಲನಗರ್ | 4 | 0 | 12000.00 | 29 | 1 | 88500.00 | 37 | 0 | 111000.00 |
| | ಒಟ್ಟು | | 88 | 1 | 265500.00 | 1283 | 2 | 3852000.00 | 1580 | 10 | 4755000.00 |
| 3 | ಕೊಪ್ಪಳ | ಗಂಗಾವತಿ | 20 | 0 | 60000.00 | 164 | 0 | 492000.00 | 186 | 7 | 568500.00 |
| | | ಕೊಪ್ಪಳ | 12 | 0 | 36000.00 | 101 | 0 | 303000.00 | 105 | 4 | 321000.00 |
| | | ಕುಷ್ಟಗಿ | 10 | 0 | 30000.00 | 62 | 0 | 186000.00 | 81 | 1 | 244500.00 |
| | | ಯೆಲಬುರ್ಗ | 5 | 0 | 15000.00 | 65 | 0 | 195000.00 | 74 | 2 | 225000.00 |
| | ಒಟ್ಟು | | 47 | 0 | 141000.00 | 392 | 0 | 1176000.00 | 446 | 14 | 1359000.00 |

| | | | | | | | | | | | |
|---|---|---|---|---|---|---|---|---|---|---|---|
| 4 | ಕಲಬುರಗಿ | ಅಫ್ ಜಲ್ ಪುರ | 8 | 0 | 24000.00 | 162 | 0 | 486000.00 | 218 | 2 | 657000.00 |
| | | ಅಳಂದ್ | 18 | 0 | 54000.00 | 223 | 0 | 669000.00 | 289 | 1 | 868500.00 |
| | | ಚಿಂಚೋಲಿ | 7 | 0 | 21000.00 | 126 | 0 | 378000.00 | 155 | 1 | 466500.00 |
| | | ಚಿತ್ತಪುರ | 16 | 0 | 48000.00 | 196 | 0 | 588000.00 | 223 | 1 | 670500.00 |
| | | ಜೇವರ್ಗಿ | 11 | 0 | 33000.00 | 214 | 0 | 642000.00 | 233 | 1 | 700500.00 |
| | | ಕಲಬುರ್ಗಿ | 162 | 0 | 486000.00 | 804 | 0 | 2412000.00 | 1027 | 6 | 3090000.00 |
| | | ಕಲಗಿ | 2 | 0 | 6000.00 | 53 | 0 | 159000.00 | 66 | 2 | 201000.00 |
| | | ಕಮಲಪುರ್ | 6 | 0 | 18000.00 | 61 | 0 | 183000.00 | 83 | 0 | 249000.00 |
| | | ಸೇಡಂ | 11 | 0 | 33000.00 | 128 | 0 | 384000.00 | 162 | 1 | 487500.00 |
| | | ಶಹಾಬಾದ್ | 0 | 0 | 0.00 | 41 | 0 | 123000.00 | 70 | 1 | 211500.00 |
| | | ಯಡ್ರಾಮಿ | 0 | 0 | 0.00 | 57 | 0 | 171000.00 | 80 | 0 | 240000.00 |
| ಒಟ್ಟು | | | 241 | 0 | 723000.00 | 2065 | 0 | 6195000.00 | 2606 | 16 | 7842000.00 |
| | | | | | | | | | | | |
| 5 | ರಾಯಚೂರು | ದೇವದುರ್ಗ | 8 | 0 | 24000.00 | 257 | 0 | 771000.00 | 317 | 7 | 961500.00 |
| | | ಲಿಂಗಸೂರು | 18 | 0 | 54000.00 | 428 | 0 | 1284000.00 | 464 | 8 | 1404000.00 |
| | | ಮಾನ್ವಿ | 12 | 0 | 36000.00 | 515 | 0 | 1545000.00 | 490 | 0 | 1470000.00 |
| | | ರಾಯಚೂರು | 17 | 0 | 51000.00 | 352 | 0 | 1056000.00 | 401 | 7 | 1213500.00 |
| | | ಸಿಂಧನೂರು | 21 | 0 | 63000.00 | 542 | 0 | 1626000.00 | 597 | 1 | 1792500.00 |
| ಒಟ್ಟು | | | 76 | 0 | 228000.00 | 2094 | 0 | 6282000.00 | 2269 | 23 | 6841500.00 |
| | | | | | | | | | | | |
| 6 | ಯಾದಗಿರಿ | ಗುರುಮಿಟ್ಕಲ್ | 2 | 0 | 6000.00 | 111 | 0 | 333000.00 | 143 | 0 | 429000.00 |
| | | ಹುಣಸಗಿ | 2 | 0 | 6000.00 | 81 | 0 | 243000.00 | 94 | 1 | 283500.00 |
| | | ಶಹಾಪುರ್ | 12 | 0 | 36000.00 | 325 | 0 | 975000.00 | 362 | 0 | 1086000.00 |
| | | ಶೋರಾಪುರ್ | 6 | 0 | 18000.00 | 247 | 0 | 741000.00 | 291 | 1 | 874500.00 |
| | | ವಡಗೇರ | 1 | 0 | 3000.00 | 68 | 0 | 204000.00 | 77 | 1 | 232500.00 |
| | | ಯಾದಗಿರಿ | 13 | 0 | 39000.00 | 231 | 0 | 693000.00 | 280 | 2 | 843000.00 |
| ಒಟ್ಟು | | | 36 | 0 | 108000.00 | 1063 | 0 | 3189000.00 | 1247 | 5 | 3748500.00 |

ನಿರ್ದೇಶಕರು

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ